ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ
ವಿಶ್ವವಿದ್ಯಾಲಯ, ಬೀದರ

ಭಾ.ಕೃ.ಸಂ.ಪ. – ಕೃಷಿ ವಿಜ್ಞಾನ ಕೇಂದ್ರ, ದ.ಕ., ಕಂಕನಾಡಿ, ಮಂಗಳೂರು – 575 002

# ಕಾಳುಮೆಣಸು ಬೆಳೆಯಲ್ಲಿ ಲಘು ಪೋಷಕಾಂಶಗಳ ಕೊರತೆಯನ್ನು ನೀಗಿಸಲು ಕಾಳುಮೆಣಸು ಸ್ಪೆಷಲ್ ಬಳಕೆ

ಕಾಳುಮೆಣಸು ಬಹುವಾರ್ಷಿಕ ಹಬ್ಬುವ ಬಳ್ಳಿಯಾಗಿದ್ದು, ಈ ಬೆಳೆಯನ್ನು ಕಾಳುಗಳಿಗೋಸ್ಕರ ಕೃಷಿಮಾಡುತ್ತಿದ್ದು, ಹದಮಾಡಿದ ಮೆಣಸಿನ ಕಾಳುಗಳನ್ನು ಪ್ರಮುಖವಾಗಿ ಸಾಂಬಾರು ಪದಾರ್ಥವಾಗಿ ಬಳಸುವುದಲ್ಲದೆ, ಔಷಧಿಗಳ ತಯಾರಿಕೆಯಲ್ಲೂ ಹೆಚ್ಚಿನ ಮಹತ್ವವನ್ನು ಪಡೆದಿದೆ. ಭಾರತ ಕರಿಮೆಣಸು ಉತ್ಪಾದನೆ, ಬಳಕೆ ಹಾಗೂ ರಫ್ತು ಮಾಡುವಲ್ಲಿ ವಿಶ್ವದಲ್ಲೇ ಮೊದಲ ಸ್ಥಾನ ಪಡೆದಿದೆ. ಕರಿಮೆಣಸು ಉತ್ಪಾದನೆಯಲ್ಲಿ ಕೇರಳ ಮತ್ತು ಕರ್ನಾಟಕ ಶೇ. 92ರಷ್ಟು ಪಾಲನ್ನು ಹೊಂದಿ ಮುಂಚೂಣಿಯಲ್ಲಿರುವ ರಾಜ್ಯಗಳಾಗಿವೆ.

ಪ್ರಮುಖ ಮಸಾಲೆ (ಕರಿಮೆಣಸು, ಶುಂಠಿ, ಅರಿಶಿನ ಮತ್ತು ಏಲಕ್ಕಿ) ಬೆಳೆಗಳಲ್ಲಿ ಶಾರೀರಿಕ ಹಾಗೂ ಚಯಾಪಚಯ ಅಗತ್ಯಗಳನ್ನು ಪೂರೈಸಲು ಹಾಗೂ ಲಘು ಪೋಷಕಾಂಶಗಳ ಕೊರತೆಯನ್ನು ನೀಗಿಸಲು ಐ. ಸಿ. ಎ. ಆರ್. – ಭಾರತೀಯ ಮಸಾಲೆ ಸಂಶೋಧನಾ ಸಂಸ್ಥೆ, ಕೋಝಿಕ್ಕೋಡ್, ಕೇರಳ ಇವರು ಬೆಳೆ ನಿರ್ದಿಷ್ಟ ಲಘು ಪೋಷಕಾಂಶ ಸೂತ್ರೀಕರಣಗಳನ್ನು **"ಐ.ಐ.ಎಸ್.ಆರ್.–ಕಾಳು ಮೆಣಸು ಸ್ಪೆಷಲ್"** ಲಘು ಪೋಷಕಾಂಶವನ್ನು ಕ್ಷೇತ್ರ ಪರೀಕ್ಷೆ ಹಾಗೂ ಉತ್ಕೃಷ್ಟ ತಂತ್ರಜ್ಞಾನದೊಂದಿಗೆ ಅಭಿವೃದ್ಧಿಪಡಿಸಿರುತ್ತಾರೆ.

ಕಾಳು ಮೆಣಸು ಸ್ಪೆಷಲ್ ಪರಿಸರ ಸ್ನೇಹಿಯಾಗಿದೆ ಮತ್ತು ಸಂಸ್ಥೆಯು ಅಭಿವೃದ್ಧಿಪಡಿಸಿದ ಲಘು ಪೋಷಕಾಂಶಗಳ ಸೂತ್ರೀಕರಣವು ಈಗಾಗಲೇ ರೈತ ಸಮುದಾಯದಲ್ಲಿ ಜನಪ್ರಿಯವಾಗಿದೆ. ಲಘು ಪೋಷಕಾಂಶಗಳ ಮಿಶ್ರಣವು ಮೆಗ್ನೀಷಿಯಮ್, ಸತು ಮತ್ತು ಬೋರಾನ್‌ನಂತಹ ದ್ವಿತೀಯ ಲಘು ಪೋಷಕಾಂಶಗಳ ಸೂಕ್ತ ಅನುಪಾತವನ್ನು ನಿರ್ವಹಿಸುವ ಮೂಲಕ ಕಾಳು ಮೆಣಸು ಬೆಳೆಗೆ ಅಗತ್ಯತೆಗಳನ್ನು ಪೂರೈಸಲು ವಿನ್ಯಾಸಗೊಳಿಸಲಾಗಿದೆ.

ಕಾಳು ಮೆಣಸು ಸ್ಪೆಷಲ್ ಲಘು ಪೋಷಕಾಂಶವನ್ನು ಬಳಸುವುದರಿಂದ ಉತ್ಪನ್ನದ ಗುಣಮಟ್ಟವನ್ನು ಹೆಚ್ಚಿಸುತ್ತದೆ, ಅಲ್ಲದೆ ಸಮತೋಲಿತ ಪೋಷಣೆಯ ಮೂಲಕ ಬಳ್ಳಿಗಳ ಆರೋಗ್ಯಕ್ಕೆ ಸಹಕಾರಿಯಾಗಿದೆ. ಕಾಳು ಮೆಣಸಿನ ಇಳುವರಿಯನ್ನು ಶೇ. 10 ರಿಂದ 25 ರಷ್ಟು ಹೆಚ್ಚಿಸುತ್ತದೆ ಹಾಗೂ ಬಳ್ಳಿಗಳ ಆರೋಗ್ಯ ಮತ್ತು ಗುಣಮಟ್ಟವನ್ನು ಸುಧಾರಿಸುತ್ತದೆ. ನೀರಿನಲ್ಲಿ ಕರಗುವ ಸರಳ ಅಥವಾ ಸಂಕೀರ್ಣ ರಸಗೊಬ್ಬರಗಳೊಂದಿಗೆ ಹೊಂದಿಕೊಳ್ಳುತ್ತದೆ ಮತ್ತು ಉತ್ಪನ್ನಗಳ ಬೃಹತ್ ಸಾಂದ್ರತೆಯನ್ನು ಹೆಚ್ಚಿಸುತ್ತದೆ.

**ಸಿಂಪರಣಾ ಪ್ರಮಾಣ, ಸಮಯ ಮತ್ತು ವಿಧಾನ:** ಕಾಳು ಮೆಣಸು ಸ್ಪೆಷಲ್ ಲಘು ಪೋಷಕಾಂಶವನ್ನು ಪ್ರತಿ ಲೀ. ನೀರಿಗೆ 5.0 ಗ್ರಾಂ ನಂತೆ 15 ಲೀ. ನೀರಿನಲ್ಲಿ ಕರಗಿಸಿ, ಮುಂಗಾರು ಮಳೆ ಆರಂಭವಾಗುವ ಮುನ್ನ ಹೂ ಬಿಡುವ ಸಮಯದಲ್ಲಿ ಮೊದಲ ಸಿಂಪರಣೆ ಮತ್ತು ಮೊದಲ ಸಿಂಪರಣೆ ನಂತರ ಒಂದು ತಿಂಗಳ ಅಂತರದಲ್ಲಿ ಇತರೆ ಎರಡು ಸಿಂಪರಣೆಗಳನ್ನು ಮಾಡಬೇಕಾಗುತ್ತದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ**

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು
ಭಾ. ಕೃ. ಅ. ಪ. – ಕೃಷಿ ವಿಜ್ಞಾನ ಕೇಂದ್ರ,
ಮೀನುಗಾರಿಕಾ ಕಾಲೇಜು ಆವರಣ, ಎಕ್ಕೂರು, ಕಂಕನಾಡಿ ಅಂಚೆ,
ಮಂಗಳೂರು, ದಕ್ಷಿಣ ಕನ್ನಡ – 575002
www.kvkdk.org , kvkdk@rediffmail.com , 0824–2431872